UASB
LIBRARY
Newspaper Clippings
Pg .1 Thursday 02-09-2021 Jai Kisan



ಬೇಕರಿ ತರಬೇತಿಗೆ ಕೃಷಿ ವಿವಿಯಿಂದ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಬೇಕರಿ ತರಬೇತಿ ಘಟಕದ ವತಿಯಿಂದ 4 ವಾರಗಳ ಬೇಕರಿ ತರಬೇತಿ ನೀಡುತ್ತಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಸೆ.6ರಿಂದ ಆರಂಭವಾಗಲಿರುವ ಬೇಕರಿ ತರಬೇತಿಯಲ್ಲಿ ಬೇಕರಿದಾರರಿಗೆ ಮತ್ತು ಗೃಹಿಣಿಯರಿಗೆ ಆದ್ಯತೆ ನೀಡಲಾಗುವುದು. ಯಾವುದೇ ವಿದ್ಯಾರ್ಹತೆ ಅವಶ್ಯಕತೆಯಿಲ್ಲ. ತಯಾರಿಕೆಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ತರಬೇತಿ ಘಟಕದಲ್ಲೇ ಒದಗಿಸಲಾಗುವುದು .ಹೆಚ್ಚಿನ ಮಾಹಿತಿಗೆ ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು-560 024 ಅಥವಾ ದೂ. 080 23513370ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಭಾರತದ ಸಕ್ಕರೆ ರಫ್ತು ಸ್ಥಗಿತ

ನವದೆಹಲಿ (ಪಿಟಿಐ): ಅಫ್ಘಾನಿಸ್ತಾನಕ್ಕೆ ಭಾರತದ ಸಕ್ಕರೆ ರಫ್ತು ಬಹುತೇಕ ಸ್ಥಗಿತಗೊಂಡಿದೆ. ಅಲ್ಲಿನ ಸದ್ಯದ ಪರಿಸ್ಥಿತಿಯನ್ನು ಮನಗಂಡು ಭಾರತೀಯ ವ್ಯಾಪಾರಿಗಳು ಸಕ್ಕರೆ ಪೂರೈಕೆಯನ್ನು ನಿಲ್ಲಿಸಿದ್ದಾರೆ ಎಂದು ಸರ್ಕಾರಿ ಅಧಿಕಾರಿಯೊಬ್ಬರು ಬುಧವಾರ ಹೇಳಿದ್ದಾರೆ.

ಭಾರತವು ಸಕ್ಕರೆ ರಫ್ತು ಮಾಡುವ ಮೂರು ಅಗ್ರ ದೇಶಗಳಲ್ಲಿ ಅಫ್ಘಾನಿಸ್ತಾನವು ಒಂದಾಗಿದೆ. ಅಲ್ಲಿಗೆ ವರ್ಷಕ್ಕೆ 6-7 ಲಕ್ಷ ಟನ್ ಸಕ್ಕರೆ ರಫ್ತಾಗುತ್ತದೆ.

'ಅಫ್ಘನ್‌ನಲ್ಲಿ ಸದ್ಯ ಪರಿಸ್ಥಿತಿ ಬಿಗಡಾಯಿಸಿರುವುದರಿಂದ ಅಲ್ಲಿಗೆ ನಮ್ಮ ಸಕ್ಕರೆ ರಫ್ತು ಸ್ಥಗಿತಗೊಂಡಿದೆ. ಈಗ ಬಂದಿರುವ ಕೆಲವು ಪೂರೈಕೆ ಬೇಡಿಕೆಗಳನ್ನು ರದ್ದುಗೊಳಿಸಲಾಗಿದೆ' ಎಂದು ಆಹಾರ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಬೋಧ್ ಕುಮಾರ್ ಸಿಂಗ್ ಪಿಟಿಐಗೆ ತಿಳಿಸಿದರು.

02-09-2021 Pv Pg 07

02-09-2021 Kp Pg 09

ಕೆಂಪಡಕೆ ದರ ನಿರಂತರ ಏರಿಕೆ

ಕ್ವಿಂಟಲ್‌ಗೆ ಅರ್ಧ ಲಕ್ಷಕ್ಕೆ ಸಮೀಪಿಸಿದ ದರ । ಬೆಳೆಗಾರರಿಗೆ ಆಶ್ಚರ್ಯ

■ **ಕಂಚೀಕೈ ವಿರೂಪಾಕ್ಷ ಹೆಗಡೆ** ಶಿರಸಿ

ಮಳೆಗಾಲದ ಮಧ್ಯೆ ಹಬ್ಬಗಳ ಸರಣಿ ಪ್ರಾರಂಭವಾಗುವ ಹೊಸ್ತಿಲಿನಲ್ಲಿ ಅಡಕೆ ಟೆಂಡರ್ ಮಾರುಕಟ್ಟೆಯಲ್ಲಿ ನಿರಂತರ ಏರಿಕೆ ಆಗುತ್ತಲೇ ಇದೆ. ಈ ವಿದ್ಯಮಾನ ಬೆಳೆಗಾರರನ್ನು ಚಕಿತಗೊಳಿಸುತ್ತಿದೆ.

ಕಳೆದ ಮೂರ್ನಾಲ್ಕು ತಿಂಗಳಿಂದ ಕೆಂಪಡಕೆ ದರ ಕ್ವಿಂಟಲ್‌ಗೆ ಸರಾಸರಿ 40 ಸಾವಿರ ರೂ. ಮತ್ತು ಗರಿಷ್ಠ 42 ಸಾವಿರ ರೂಗಳಿಗೆ ಮಾರುಕಟ್ಟೆಯಲ್ಲಿ ವಿಕ್ರಯವಾಗುತ್ತಿತ್ತು. ಆದರೆ ಪ್ರಸ್ತುತ ಹದಿನೈದು ದಿನಗಳ ಈಚೆಗೆ ಹಂತಹಂತವಾಗಿ ಏರುತ್ತಿರುವ ದರ ಮಾರುಕಟ್ಟೆಯಲ್ಲಿ ದೊಡ್ಡ ಸಂಚಲನವನ್ನೇ ಉಂಟು ಮಾಡಿದೆ.



ಕ್ವಿಂಟಲ್‌ಗೆ ಕನಿಷ್ಠ -ಗರಿಷ್ಠ

ಆಗಸ್ಟ್ 7:	39600-41500
ಆಗಸ್ಟ್ 22:	41700-44300
ಆಗಸ್ಟ್ 28:	41900-45800
ಸೆಪ್ಟೆಂಬರ್ 1:	43500-47100

ಶ್ರಾವಣದ ಸುಗ್ಗಿ

ಕೆಂಪಡಕೆ ದರ ಹೆಚ್ಚಳ ವಿದ್ಯಮಾನ ಕೆಲವೇ ಬೆಳೆಗಾರರಿಗೆ ಮಾತ್ರ ಖುಷಿ ತರುವಂಥದ್ದಾಗಿದೆ. ಯಾಕೆಂದರೆ ಈಗ ಅಡಕೆ ಹಂಗಾಮು ಅಲ್ಲ, ಹಂಗಾಮು ಮುಗಿದು ನಾಲ್ಕೈದು ತಿಂಗಳುಗಳೇ ಕಳೆದುಹೋಗಿವೆ. ಆಗಲೇ ಬಹುಪಾಲು ರೈತರು ಮಾರುಕಟ್ಟೆಗೆ ಅಡಕೆ ತಂದು ಮಾರಿದ್ದಾರೆ. ಇದರಿಂದಾಗಿ ಈಗ ಬೆಳೆಗಾರರಲ್ಲಿ ಶೇ.10-20ರಷ್ಟು ಮಾತ್ರ ಶಿಲ್ಕು ಇದೆ. ಅಂಥವರಿಗೆ ಮಾತ್ರ ಈಗ ಅರ್ಧ ಲಕ್ಷ ರೂ. ಸಮೀಪಿಸಿರುವ ತೇಜಿ ದರದ ಲಾಭ ಸಿಗಲಿದೆ.

ಬುಧವಾರ ಶಿರಸಿ ಮಾರುಕಟ್ಟೆಯಲ್ಲಿ ಕೆಂಪಡಕೆ ಗರಿಷ್ಠ ದರ 47 ಸಾವಿರ ರೂ.ದಾಟಿದೆ. ಇದು ಕಳೆದ ಎರಡು ವರ್ಷಗಳ ಇದೇ ಅವಧಿಯ ದರ ಗಮನಿಸಿದರೆ ದಾಖಲೆಯ ದರವಾಗಿದೆ. ಆಯಾ ಪ್ರದೇಶದ ಅಡಕೆ ಗುಣಮಟ್ಟಕ್ಕೆ ಅನುಗುಣವಾಗಿ ದರ 3ರಿಂದ 4 ಸಾವಿರ ವ್ಯತ್ಯಾಸ ಇರುತ್ತದೆ. ಅಂದರೆ ಈಗಾಗಲೇ 50 ಸಾವಿರ ರೂ.ಗಳನ್ನು ದಾಟಿರುವ ಶಿವಮೊಗ್ಗ ಮಾರುಕಟ್ಟೆ ದರ ಈಗ 47 ಸಾವಿರ ರೂ.ದಾಟಿರುವ ಶಿರಸಿಯ ಕೆಂಪಡಕೆ ದರಕ್ಕೆ ಬಹುತೇಕ ಸಮನಾಗಿದೆ ಎಂಬುದಾಗಿ ವ್ಯಾಪಾರಸ್ಥರು ಹೇಳುತ್ತಾರೆ.

ಬಹುತೇಕ ಸ್ಥಿರ: ಪ್ರಮುಖ ಪ್ರಕಾರಗಳಾದ ಕೆಂಪಡಕೆ ಮತ್ತು ಚಾಲಿ ಅಡಕೆ ದರ ಕಳೆದ ಎರಡು ವರ್ಷಗಳ ಈಚೆಗೆ ಬಹುತೇಕ ಸ್ಥಿರವಾಗಿದೆ. ಕಳೆದ ಎರಡು ದಶಕಗಳಲ್ಲಿ ಬಹಳಷ್ಟು ಏರಿಳಿತ ಕಂಡಿದ್ದ ಅಡಕೆ ಮಾರುಕಟ್ಟೆ ಹೀಗೆ ಉತ್ತಮ ದರದೊಂದಿಗೆ ಮುನ್ನಡೆದಿರುವುದು ಕೃಷಿಕರಲ್ಲಿ ನೆಮ್ಮದಿ ಮೂಡಿಸಿದೆ. ಕೋವಿಡ್ ಸೋಂಕು ಅಡಕೆ ಮಾರುಕಟ್ಟೆ ಮೇಲೆ ಆಗಿಲ್ಲ.

02-09-2021 Vk Pg 05

ಜಿಐ ಟ್ಯಾಗ್ ಪಡೆದ ಬಳಿಕ ಹೆಚ್ಚಿದ ಬೇಡಿಕೆ, ಬೆಲೆ

₹600 ಕೋಟಿ ಮೊತ್ತದ 'ಶಿರಸಿ ಸುಪಾರಿ' ರಫ್ತು

• ಗಣಪತಿ ಹೆಗಡೆ

ಶಿರಸಿ: ಜಾಗತಿಕ ಸೂಚಿ (ಜಿಐ ಟ್ಯಾಗ್) ಪಡೆದ ಬಳಿಕ 'ಶಿರಸಿ ಸುಪಾರಿ' ಎರಡು ವರ್ಷಗಳಲ್ಲಿ ₹ 600 ಕೋಟಿ ಮೊತ್ತದ ರಫ್ತು ವಹಿವಾಟು ಕಂಡಿದೆ.

ಶಿರಸಿ, ಸಿದ್ದಾಪುರ ಮತ್ತು ಯಲ್ಲಾಪುರ ಭಾಗದಲ್ಲಿ ಬೆಳೆಯಲಾಗುವ ಕೆಂಪಡಿಕೆ, ಚಾಲಿಗೆ ಇಲ್ಲಿನ ಟಿಎಸ್‌ಎಸ್ ಸಂಸ್ಥೆ 2019ರ ಮಾರ್ಚ್‌ನಲ್ಲಿ ಜಿಐ ಟ್ಯಾಗ್ ಪಡೆದುಕೊಂಡಿದೆ. ಈ ಟ್ಯಾಗ್ ಅಡಿಯಲ್ಲಿ ಸಂಸ್ಥೆ 2.04 ಲಕ್ಷ ಕ್ವಿಂಟಲ್ ಅಡಿಕೆ ವಹಿವಾಟು ನಡೆಸಿದೆ. ಇದು ದಾಖಲೆ ಪ್ರಮಾಣದ ವಹಿವಾಟು ಎಂಬುದು ಮಾರುಕಟ್ಟೆ ತಜ್ಞರ ಅಭಿಪ್ರಾಯ.

ಜಿಐ ಟ್ಯಾಗ್ ಪಡೆಯುವುದಕ್ಕೂ ಮೊದಲಿನ ಆರ್ಥಿಕ ವಹಿವಾಟಿಗೆ ಹೋಲಿಕೆ ಮಾಡಿದರೆ ಎರಡು ವರ್ಷಗಳಲ್ಲಿ ವ್ಯಾಪಾರದ ಮೊತ್ತ ಶೇ 25ರಿಂದ 30ರಷ್ಟು ಏರಿಕೆ ಕಂಡಿದೆ ಎಂದು ಸಂಸ್ಥೆ ಹೇಳಿದೆ.



ಶಿರಸಿಯ ಟಿಎಸ್‌ಎಸ್ ಸಂಸ್ಥೆಯ ವ್ಯಾಪಾರಿ ಅಂಗಳದಲ್ಲಿ ರಾಶಿ ಹಾಕಲಾಗಿರುವ ಕೆಂಪಡಿಕೆ ಮತ್ತು ಚಾಲಿ

'ಜಿಐ ಟ್ಯಾಗ್ ಪಡೆದುಕೊಂಡ ಬಳಿಕ ಉತ್ತರ ಭಾರತದ ಮಾರುಕಟ್ಟೆಯಲ್ಲಿ ಈ ಭಾಗದ ಅಡಿಕೆಗೆ ಬೇಡಿಕೆ ವೃದ್ಧಿಯಾಗಿದೆ. ದರವೂ ಹೆಚ್ಚಿದೆ' ಎನ್ನುತ್ತಾರೆ ಟಿಎಸ್‌ಎಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ರವೀಶ ಹೆಗಡೆ.

'ರೈತರಿಂದ ಖರೀದಿಸಿದ ಅಡಿಕೆಯನ್ನು ಗುಣಮಟ್ಟ ಆಧರಿಸಿ ಪ್ರತ್ಯೇಕಿಸುತ್ತೇವೆ. ಬೆಟ್ಟೆ, ಕೆಂಪಡಿಕೆ, ಚಾಲಿಯ ಪ್ರತ್ಯೇಕ ಬ್ರ್ಯಾಂಡಿಂಗ್ ಗಳನ್ನು ಪ್ರಾದೇಶಿಕ ಬೇಡಿಕೆಗೆ ಅನುಗುಣವಾಗಿ ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಕ್ಕೆ ಕಳುಹಿಸುತ್ತಿದ್ದೇವೆ. ರಾಜ್ಯದಲ್ಲೂ ಹಲವೆಡೆ ಬೇಡಿಕೆ ಇದೆ' ಎನ್ನುತ್ತಾರೆ ಅವರು.

'ಅಡಿಕೆ ಬೆಲೆ ಸ್ಥಿತ್ಯಂತರಗೊಳ್ಳುತ್ತಲೇ ಇತ್ತು. ಜಿಐ ಟ್ಯಾಗ್ ಪಡೆದ ಬಳಿಕ 'ಶಿರಸಿ ಸುಪಾರಿ' ಬ್ರ್ಯಾಂಡ್ ಅಡಿಯಲ್ಲಿ ರಫ್ತು ಚಟುವಟಿಕೆ ಕೈಗೊಂಡಿದ್ದು ವಹಿವಾಟು ಹೆಚ್ಚುವ ಜತೆಗೆ ಉತ್ತಮ ಬೆಲೆ ಸಿಗುವಂತೆ ಮಾಡಿದೆ' ಎಂದು ಅಭಿಪ್ರಾಯಪಟ್ಟರು.

ಜಿಐ ಟ್ಯಾಗ್ ಪಡೆದ ಬಳಿಕ ಶಿರಸಿ ಸುಪಾರಿಯ ಗುಣಮಟ್ಟದ ಬಗ್ಗೆ ಉತ್ತರ ಭಾರತವೂ ಸೇರಿದಂತೆ ದೇಶದ ವಿವಿಧೆಡೆ ಗ್ರಾಹಕರಲ್ಲಿ ವಿಶ್ವಾಸ ಮೂಡಿದ್ದೆ ಉತ್ತಮ ಬೆಲೆ ದೊರೆಯಲು ಕಾರಣ.
ರವೀಶ ಹೆಗಡೆ, ಟಿಎಸ್‌ಎಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ

ಕೆಂಪು ಅಡಿಕೆಗೆ ದಾಖಲೆ ಬೆಲೆ 11

02-09-2021
Pv Pg 3B

ಕೋಟಿ ದಕ್ಕಿಸಿದ ಫೋಲ್ ಫಿಶ್

ಪಾಲ್ಘರ್ ಮೀನುಗಾರರ ಬಲೆಗೆ ಚಿನ್ನದ ಮೀನು

ಪಾಲ್ಘರ್: ಮಳೆಗಾಲ ಹಾಗೂ ಲಾಕ್‌ಡೌನ್ ಇದ್ದ ಕಾರಣ ತಿಂಗಳುಗಳ ಬಿಡುವಿನ ಬಳಿಕ ಸಮುದ್ರಕ್ಕೆ ಇಳಿದಿದ್ದ ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಮೀನುಗಾರರು ಮೀನುಗಾರಿಕೆ ಮುಗಿಸಿ ಮನೆಗೆ ಮರಳುವಷ್ಟರಲ್ಲಿ ಕೋಟ್ಯಧಿಪತಿಗಳಾಗಿದ್ದಾರೆ. ಏಕೆಂದರೆ, ಅವರ ಬಲೆಗೆ ಸಿಕ್ಕಿದ್ದು ದೇಶದಲ್ಲೇ ದುಬಾರಿ ಮೀನು ಎನಿಸಿಕೊಂಡ ಎನಿಸಿಕೊಂಡ ಫೋಲ್ ಫಿಶ್‌ಗಳು!

'ಸಮುದ್ರದ ಚಿನ್ನ' ಎಂದೇ ಕರೆಸಿಕೊಳ್ಳುವ 157 ಫೋಲ್ ಫಿಶ್‌ಗಳ ಒಂದು ಲಾಟ್ ಬರೋಬ್ಬರಿ ಬರೋಬ್ಬರಿ 1.33 ಕೋಟಿ ರು.ಗಳಿಗೆ ಮಾರಾಟವಾಗಿದೆ.

ಅದೃಷ್ಟದ ಬೇಟೆ: ಪಾಲ್ಘರ್‌ನ ಮೀನುಗಾರ ಚಂದ್ರಕಾಂತ್ ತಾರೆ ಎನ್ನುವವರು 8 ಮಂದಿ ಸಂಗಡಿಗರ ಜೊತೆ ಆ.15ರಂದು ಮೀನುಗಾರಿಕೆಗೆಂದು ಅರಬ್ಬೀ ಸಮುದ್ರಕ್ಕೆ ತೆರಳಿದ್ದರು. ಆ.28ರಂದು ಮೀನುಗಾರಿಕೆ ನಡೆಸುತ್ತಿದ್ದ ವೇಳೆ 157 ಫೋಲ್ ಫಿಶ್‌ಗಳು ಬಲೆಗೆ ಬಿದ್ದಿವೆ. ಚಂದ್ರಕಾಂತ್ ತಂಡ ಮೀನುಗಾರಿಕೆ ಮುಗಿಸಿ ದಡಕ್ಕೆ ಮರಳುವಷ್ಟರಲ್ಲಿ ಫೋಲ್ ಫಿಶ್ ಖರೀದಿಗೆ ವ್ಯಾಪಾರಿಗಳ ದಂಡೇ ನೆರೆದಿತ್ತು. ಹರಾಜಿನ ವೇಳೆ ವ್ಯಾಪಾರಿಗಳು ಫೋಲ್ ಫಿಶ್‌ಗಳ ಸಂಪೂರ್ಣ ಲಾಟ್ ಅನ್ನು 1.33 ಕೋಟಿ ರು.ಗಳಿಗೆ ಖರೀದಿಸಿದ್ದಾರೆ.



ದುಬಾರಿ ಬೆಲೆ ಏಕೆ?

ಫೋಲ್ ಫಿಶ್‌ಗಳು ಅತಿ ಹೆಚ್ಚಿನ ಔಷಧೀಯ ಗುಣವನ್ನು ಹೊಂದಿದೆ. ಈ ಮೀನಿನ ಪ್ರತಿಯೊಂದು ಭಾಗವೂ ವಿವಿಧ ರೀತಿಯ ಔಷಧ ತಯಾರಿಕೆಗೆ ಬಳಕೆ ಆಗುತ್ತದೆ. ಸೌಂದರ್ಯ ವರ್ಧಕಗಳು, ಶಸ್ತ್ರಚಿಕಿತ್ಸೆಯ ವೇಳೆ ಸ್ಟಿಚ್‌ಗೆ ಬಳಸುವ ದಾರದ ತಯಾರಿಕೆ ಹೀಗೆ ನಾನಾ ಕಾರಣಕ್ಕೆ ಬಳಕೆ ಆಗುತ್ತದೆ.

02-09-2021
Kp Pg 09

ಖಾಸಗಿ ಕಂಪನಿ ಕೊಟ್ಟ ತಳಿ ಬೇರೆ, ಬೆಳೆದಿದ್ದು ಬೇರೆ | ಹುಸಿಯಾದ ಲಾಭದ ನಿರೀಕ್ಷೆ | ಬಾಳೆತೋಟಕ್ಕೆ ಭೇಟಿ ನೀಡಿದ ತಜ್ಞರ ತಂಡ

ಬಣ್ಣದ ಮಾತಿಗೆ ಮರುಳಾಗಿ ಬಾಳೆ ನಂಬಿ ಮೋಸ ಹೋದ ಬೆಳೆಗಾರರು

◆ಮಣಿಕಂಠ, ಬಾಗೇಪಲ್ಲಿ



ಬಾಗೇಪಲ್ಲಿ: ಬಾಳೆ ಬೇಸಾಯದಲ್ಲಿ ಕಂಪನಿ ಕೊಟ್ಟಿದ್ದು ಒಂದು ತಳಿ, ಆದರೆ ಬೆಳೆ ಬಂದಿದ್ದು ಮತ್ತೊಂದು ತಳಿ. ಇದರಿಂದ ಬೆಳೆ ಬೆಳೆದ ರೈತನಿಗೆ ಲಕ್ಷಾಂತರ ರೂ. ನಷ್ಟವಾಗಿದೆ. ಲಾಭದ ನಿರೀಕ್ಷೆಯಲ್ಲಿದ್ದ ರೈತ ಕಂಗಲಾಗಿದ್ದಾನೆ.

ತಾಲೂಕಿನ ಗೂಳೂರು ಹೋಬಳಿ ಮಾರ್ಗನೂ ಕುಟೆ ಗ್ರಾಪಂ ವ್ಯಾಪ್ತಿಯ ಪಾಕಮಾಕಲಪಲ್ಲಿ ಗ್ರಾಮದ ರೈತ ರಾಮಲಿಂಗಾರೆಡ್ಡಿ 3.5 ಎಕರೆಯಲ್ಲಿ ಬಾಳೆ ಬೇಸಾಯ ಮಾಡಿದ್ದರು. ಗೌರಿಬಿದನೂರು ಬಳಿ ಇರುವ ಕಂಕರೆ ಫಾರಂನಲ್ಲಿರುವ ಐಆರ್‌ಎಂ ಎಂಟರ್ ಪ್ರೈಸಸ್ ಪ್ರವೇಟ್‌ಲಿಮಿಟೆಡ್ ಕಂಪನಿಯಿಂದ 2020ರಲ್ಲಿ ಏಲಕ್ಕಿ ತಳಿಯ 3150 ಬಾಳೆ ಗಿಡವನ್ನು ಖರೀದಿಸಿ 9.10 ಲಕ್ಷ ರೂ. ಖರ್ಚು ಮಾಡಿ ಸಾವಯವ ಕೃಷಿ ಪದ್ಧತಿಯಲ್ಲಿ ಕೊಟ್ಟಿಗೆ ಗೊಬ್ಬರ ಹಾಕಿ ನಾಟಿ ಮಾಡಿ ಸಮೃದ್ಧವಾಗಿ ಬೆಳೆಸಿದ್ದಾರೆ.

ಹುಳಿ ಇರುವ ದೊಡ್ಡ ಗಾತ್ರದ ಬೆಳೆ: ಏಲಕ್ಕಿ ಬಾಳೆ ಹಣ್ಣು ಬೆಳೆಯುವ ಉದ್ದೇಶದಿಂದ (ಟಿಶ್ಯುಕಲ್ಚರ್ ಪ್ಲಾಂಟ್) ಪದ್ಧತಿಯಲ್ಲಿ ಗಿಡಗಳನ್ನು ನಾಟಿ ಮಾಡಿದ್ದರು. ಬಾಳೆ ಗಿಡಗಳು ಸುಮಾರು 14, 15 ಎತ್ತರಕ್ಕೆ ಸಮೃದ್ಧವಾಗಿ ಬೆಳೆದು ಬಂಪರ್ ಬೆಳೆಯಾಗಿದೆ 20 ಲಕ್ಷ ರೂ. ಲಾಭದ ನಿರೀಕ್ಷೆಯಲ್ಲಿದ್ದ ರೈತ ರಾಮಲಿಂಗಾರೆಡ್ಡಿ. ಆದರೆ ಏಲಕ್ಕಿ ಬಾಳೆ ಫಸಲಿಗೆ ಬದಲಾಗಿ ಬೇರೆ ಹುಳಿ ಇರುವ ದೊಡ್ಡ ಗಾತ್ರದ ಬಾಳೆ ಹಣ್ಣಿನ ತಳಿ ಗೊನೆ ಬಿಟ್ಟಿದೆ.

ಮೂರು ವರ್ಷದ ಬೆಳೆ: ಏಲಕ್ಕಿ ಬಾಳೆ ಮಾರ್ಕಟ್ಟೆಯಲ್ಲಿ 40ರಿಂದ 45ರೂ. ಬೆಲೆ ಇದೆ. ಈಗ ಬಿಟ್ಟಿರುವ ಬಾಳೆಹಣ್ಣು ಕೇವಲ 10, 15ರೂ. ಮಾರಾಟವಾಗಲಿದೆ. ಪ್ರಸ್ತುತ ಇದು ಮೂರು ವರ್ಷಗಳ ಬೆಳೆಯಾಗಿದೆ. ಪ್ರತಿ ವರ್ಷಕ್ಕೆ ಸುಮಾರು 20, 25 ಲಕ್ಷ ರೂ. ಲಾಭ ಬರುತ್ತೆ 3ವರ್ಷಕ್ಕೆ 60, 75ಲಕ್ಷ ರೂ. ನಿರೀಕ್ಷೆಯಲ್ಲಲ್ಲದ್ದ ರೈತ ತೀವ್ರ ನಷ್ಟಕ್ಕೆ ಗುರಿಯಾಗಿದ್ದಾರೆ.

ರೈತರ ನಷ್ಟ ಕಂಡು ತಜ್ಞರ ತಂಡದ ಭೇಟಿ: ಕೋಲಾರ ಸಮೀಪದ ಹೊಗಳಗೆರೆ ತೋಟಗಾರಿಕಾ ಸಂಶೋಧನಾ ಕೇಂದ್ರದ ವಿಜ್ಞಾನಿಗಳ ತಂಡದ ಹೊಗಳಗೆರೆ ಕೇಂದ್ರದ ಮುಖ್ಯಸ್ಥ ಡಾ:ರಾಮಚಂದ್ರ ಅವರ ತಂಡ ಹಣ್ಣಿನ ಬೆಳೆ ತಜ್ಞ ಡಾ. ರಾಜೇಂದ್ರ. ಕೀಟ ಶಾಸ್ತ್ರತಜ್ಞ ಡಾ.ಅಶ್ವಥನಾರಾಯಣರೆಡ್ಡಿ ಹಾಗೂ ತಾಲೂಕು ತೋಟಗಾರಿಕೆ ಸಹಾಯಕ ನಿರ್ದೇಶಕ ವೈ.ಬಿ.ಈಶ್ವರಪ್ಪರವರು ಪಾಕ ಮಾಕಲಪಲ್ಲಿ ಗ್ರಾಮದ ರೈತ ರಾಮಲಿಂಗಾರೆಡ್ಡಿ ಬಾಳೆ ತೋಟಕ್ಕೆ ಭೇಟಿ ನೀಡಿ ಬಾಳೆ ಗಿಡ.ಗೊನೆ ಬಾಳೆಹಣ್ಣುಗಳನ್ನು ಪರಿಶೀಲಿಸಿದರು.

ತಜ್ಞರಿಂದ ಮಾದರಿ ಸಂಗ್ರಹ: ರೈತರು ಬೆಳೆದ ಹೊಸ ಮಾದರಿ ಬೆಳೆಯ ಮಾದರಿಯನ್ನು ತಜ್ಞರ ತಂಡ ಸಂಗ್ರಹಿಸಿದರು. ಈ ಮಾದರಿಯನ್ನು ಪ್ರಯೋಗಾಲಯಕ್ಕೆ ತೆಗದುಕೊಂಡು ಹೋಗುವುದಾಗಿ ತಿಳಿಸಿದ ತಜ್ಞರು ರೈತ ರಾಮಲಿಂಗಾರೆಡ್ಡಿಯವರು ಬಾಳೆಹಣ್ಣಿನ ಬೆಳೆಯನ್ನು ಉತ್ತಮವಾಗಿ ನಿರ್ವಹಣೆ ಮಾಡಿದ್ದಾರೆ. ಆದರೆ, ತಳಿಯಲ್ಲಿ ವ್ಯತ್ಯಸವಾಗಿರುವುದು ರೈತನ ಆತಂಕಕ್ಕೆ ಕಾರಣವಾಗಿದೆ ಎಂದರು.

ಏಲಕ್ಕಿ ಬಾಳೆ ಎಂದು ರಸೀದಿಯಲ್ಲಿದೆ

ಕಂಕರೆ ಫಾರಂನಲ್ಲಿರುವ ಐ.ಆರ್.ಎಂ.ಎಂಟರ್ ಪ್ರೈಸಸ್ ಪ್ರೈ.ಲಿ.ನ ಕಂಪನಿಯವರು ಏಲಕ್ಕಿ ಬಾಳೆಗಿಡಗಳೆ ಎಂದು ರಸೀದಿಯನ್ನು ನೀಡಿದ್ದಾರೆ. ನಾನು ಒಂದು ವರ್ಷದಿಂದ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬೆಳೆ ಕೈಗೆ ಬರುವ ಸಮಯದಲ್ಲಿ ಏಲಕ್ಕಿಗೆ ಬದಲಾಗಿ ಬೇರೆ ತಳಿಯ ಬೆಳೆ ಬಂದು ಮೋಸವಾಗಿದೆ. ಬಿತ್ತನೆ ಮಾಡಲು ನೀಡಿರುವ ಕಂಪನಿ ವಿರುದ್ಧ ಕ್ರಮ ಜರುಗಿಸಿ ನನಗೆ ನಷ್ಟ ಪರಿಹಾರ ನೀಡಬೇಕು ಎಂದು ತಜ್ಞರ ತಂಡದ ಸದಸ್ಯರಲ್ಲಿ ರೈತ ರಾಮಲಿಂಗಾರೆಡ್ಡಿ ತಮ್ಮ ನೋವನ್ನು ತೊಡಿಕೊಂಡರು.

ಪ್ರಯೋಗಾಲಯದ ವರದಿ ಬಳಿಕ ಸ್ಪಷ್ಟ ಚಿತ್ರಣ

ತೋಟದಲ್ಲಿ ಏಲಕ್ಕಿಹಣ್ಣಿನ ಬದಲಾಗಿ ಸುಗಂಧಿ. ಪೋವಂ, ಸೇಲಂ, ಹಣ್ಣಿನ ತಳಿಯನ್ನು ಹೋಲುವ ಬಾಳೆಗೊನೆಗಳು ಬಿಟ್ಟಿರುವುದು ಕಂಡು ಬಂದಿದೆ. ಬಾಳೆ ಗಿಡಿದ ಕಾಂಡ, ಎಲೆ, ಕಾಯಿ ಮತ್ತು ಹಣ್ಣನ್ನು ಸಂಗ್ರಸಲಾಗಿದೆ. ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿದ ನಂತರ ಸ್ಪಷ್ಟ ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತೆ ಎಂದು ಹೊಗಳಗೆರೆ ಕೇಂದ್ರದ ಮುಖ್ಯಸ್ಥ ಡಾ.ರಾಮಚಂದ್ರ. ಹಣ್ಣಿನ ಬೆಳೆ ತಜ್ಞ ಡಾ:ರಾಜೇಂದ್ರ ಹೇಳಿದರು.



ಎರಡು ರೀತಿಯ ಬಾಳೆ

ತೋಟದಲ್ಲಿ ಎರಡು ರೀತಿಯ ತಳಿಗಳ ಬೆಳೆಬಂದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಇದನ್ನು ಪ್ರಯೋಗಾಲಾಯಕ್ಕೆ ಕಳುಹಿಸಿ ಒಂದು ವಾರದಲ್ಲಿ ಸಂಪೂರ್ಣ ವರದಿಯನ್ನು ಸಲ್ಲಿಸಲಾಗುವುದು ಇದರಿಂದ ರೈತನಿಗೆ ಅನ್ಯಾಯವಾಗಿರುವುದು ಕಂಡು ಬಂದಿದೆ ಎಂದು ತಜ್ಞರ ತಂಡ ತಿಳಿಸಿದೆ.

02-09-2021 Hd Pg 03

02-09-2021 Hd Pg 04

ರೈತರಿಗೆ ಅರ್ಜಿ ಆಹ್ವಾನ

ತುಮಕೂರು: ಕೃಷಿ ಇಲಾಖೆಯು ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಸಿರಿಧಾನ್ಯಗಳ ಪ್ರದೇಶ ವಿಸ್ತರಿಸಿ ಉತ್ಪಾದನೆಯನ್ನು ಹೆಚ್ಚಿಸಿ ರೈತರನ್ನು ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ರೈತಸಿರಿ ಯೋಜನೆಯಡಿ ಪ್ರೋತ್ಸಾಹಧನ ನೀಡಲು ರೈತರಿಂದ ಅರ್ಜಿ ಆಹ್ವಾನಿಸಿದೆ.

ರೈತಸಿರಿ ಯೋಜನೆಯಡಿ ಸಿರಿಧಾನ್ಯ ಬೆಳೆದ ರೈತರಿಗೆ ಪ್ರತಿ ಹೆಕ್ಟೇರ್‌ಗೆ 10,000 ಸಾವಿರ ರೂ. ಪ್ರೋತ್ಸಾಹ ಧನವನ್ನು ನೇರ ಸೌಲಭ್ಯ ವರ್ಗಾವಣೆ ಮೂಲಕ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು. ಆಸಕ್ತ ರೈತರು ಈ ಪ್ರೋತ್ಸಾಹಧನ ಸೌಲಭ್ಯ ಪಡೆಯಲು ರೈತ ಸಂಪರ್ಕ ಕೇಂದ್ರಗಳಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿ ಹೆಸರು ನೋಂದಾಯಿಸಿಕೊಳ್ಳಬೇಕು. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಅಲ್ಪ ಸಂಖ್ಯಾತ ಮಹಿಳೆಯರು/ ಹಿಂದುಳಿದ ವರ್ಗದ ರೈತರಿಗೆ ಆದ್ಯತೆ ನೀಡಲಾಗುವುದು.ಸಿರಿಧಾನ್ಯಗಳನ್ನು ಬೆಳೆಯುವ ರೈತರಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಪರಿಶೀಲಿಸಿ ಪ್ರತಿ ಹೆಕ್ಟೇರ್‌ಗೆ 10,000 ರೂ.ಗಳಂತೆ ಗರಿಷ್ಟ 2 ಹೆಕ್ಟೇರ್‌ಗೆ ಮಾತ್ರ ಸೀಮಿತವಾಗುವಂತೆ ಆಯ್ಕೆಯಾದ ಫಲಾನುಭವಿಗಳಿಗೆ ಸಿರಿಧಾನ್ಯ ಬೆಳೆದಿರುವ ವಿಸ್ತೀರ್ಣಕ್ಕೆ ಸಮಾನವಾಗಿ ಪ್ರೋತ್ಸಾಹಧನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕಿಸಬೇಕೆಂದು ಜಂಟಿ ಕೃಷಿ ನಿರ್ದೇಶಕ ರಾಜಸುಲೋಚನಾ ತಿಳಿಸಿದ್ದಾರೆ.

ರೈತರ ಪಾಲಿಗೆ ಅಕ್ಷಯಕಲ್ಪ

ತೆಂಗು ಬೆಳೆಯಲ್ಲಿ ರಾಜ್ಯ ನಂ.2 | ಅನ್ನದಾತನ ಕೈಬಿಡದ ಕಲ್ಪವೃಕ್ಷ

■ ಅವಿನಾಶ ಮೂಡಂಬಿಕಾನ ಬೆಂಗಳೂರು

ಲಕ್ಷಾಂತರ ರೈತರ ಬದುಕಿಗೆ ಆಧಾರವಾಗಿರುವ 'ತೆಂಗು' ನಿತ್ಯ ಜೀವನದಲ್ಲಿ ಒಂದಲ್ಲ ಒಂದು ಕಾರಣಕ್ಕೆ ಎಲ್ಲರಿಗೂ ಬೇಕೇಬೇಕು. ದೇವರ ಪೂಜೆಯಿಂದ ಹಿಡಿದು, ಸೌಂದರ್ಯವರ್ಧಕ ತಯಾರಿಕೆವರೆಗೆ ತೆಂಗಿಗೆ ಮಹತ್ವದ ಸ್ಥಾನವಿದೆ. ಅದರಲ್ಲೂ ತೆಂಗಿನ ಕಾಯಿ ಬಳಸದ ಅಡುಗೆಯನ್ನೂ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ದಕ್ಷಿಣ ಏಷ್ಯಾ ಮತ್ತು ಮಧ್ಯಪೂರ್ವ ಏಷ್ಯಾಗಳಲ್ಲಿ ಬೆಳೆಯಲಾಗುತ್ತಿದ್ದ ತೆಂಗಿನ ಬೆಳೆ ಈಗ ವಿಶ್ವಾದ್ಯಂತ ಹರಡಿದೆ. ತೆಂಗಿನ ಪ್ರಾಮುಖ್ಯತೆ, ಉಪಯೋಗಗಳ ಬಗ್ಗೆ ಅರಿವು ಮೂಡಿಸಲು 2009ರಿಂದ ಸೆ.2ರಂದು 'ವಿಶ್ವ ತೆಂಗಿನ ದಿನ' ಆಚರಿಸಲಾಗುತ್ತಿದೆ.

ರಾಜ್ಯಕ್ಕೆ ಎರಡನೇ ಸ್ಥಾನ: ವಿಶ್ವದಾದ್ಯಂತ 90ಕ್ಕೂ ಅಧಿಕ ದೇಶಗಳಲ್ಲಿ 55 ದಶಲಕ್ಷ ಟನ್ ತೆಂಗು ವಾರ್ಷಿಕವಾಗಿ ಬೆಳೆಯಲಾಗುತ್ತದೆ. ತೆಂಗು ಬೆಳೆಯಲ್ಲಿ ಭಾರತದಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ, ತಮಿಳುನಾಡು 2ನೇ ಸ್ಥಾನದಲ್ಲಿವೆ. ಆಂಧ್ರ, ತೆಲಂಗಾಣ ನಂತರದ ಸ್ಥಾನ ಪಡೆದುಕೊಂಡಿದೆ. ಒಂದು ತೆಂಗಿನ ಮರ ಸರಿಸುಮಾರು 60-70 ವರ್ಷ ಫಲ ನೀಡುತ್ತದೆ. ರಾಜ್ಯದಲ್ಲಿ 6.24 ಲಕ್ಷ ಹೆಕ್ಟೇರ್‌ನಲ್ಲಿ ತೆಂಗು ಬೆಳೆಯಲಾಗುತ್ತಿದ್ದು, ವಾರ್ಷಿಕವಾಗಿ 530 ಕೋಟಿ ಕಾಯಿ ಉತ್ಪಾದನೆಯಾಗುತ್ತದೆ. ತುಮಕೂರು ಜಿಲ್ಲೆಯೊಂದರಲ್ಲೇ 1.80 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಶೇ.99 ತಿಪಟೂರು ಟಾಲ್ ತಳಿ ಬೆಳೆದರೆ, ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡದಲ್ಲಿ ವೆಸ್ಟ್‌ಕೋಸ್ಟ್ ಟಾಲ್ ಬೆಳೆಯುತ್ತಾರೆ. ಇವೆರಡೂ ಹೆಚ್ಚಿನ ಫಲ ಕೊಡುವ ತಳಿಗಳಾಗಿವೆ.



ಸಾಂದರ್ಭಿಕ ಚಿತ್ರ

ಉಪಯೋಗಗಳು

- ಅಡುಗೆಗೆ ಕಾಯಿ, ಎಣ್ಣೆಗೆ ಬಳಕೆ.
- ತೆಂಗಿನ ಗರಿಯಿಂದ ವಿವಿಧ ಕರಕುಶಲ ಸಾಮಗ್ರಿ.
- ಎಳನೀರು ದೇಹಕ್ಕೆ ಪೌಷ್ಟಿಕಾಂಶ ಒದಗಿಸುತ್ತದೆ.
- ತೆಂಗಿನ ಎಣ್ಣೆ ಕೇಶರಾಶಿಗೆ ಸಹಕಾರಿ.
- ತೆಂಗಿನ ಚಿಪ್ಪಿನಿಂದ ಸೌಟು, ಶೆಲ್ ತಯಾರಿ, ಹಲವು ಅಲಂಕಾರಿಕ ವಸ್ತು ತಯಾರಿ.
- ತೆಂಗಿನ ನಾರಿನಿಂದ ತಯಾರಿಸಿದ ದಾರ ಬಹಳ ಗಟ್ಟಿಯಾಗಿದ್ದು, ಹಲವು ಕಾರ್ಯಗಳಿಗೆ ಬಳಕೆ.

ಅರಬ್ ದೇಶಗಳಿಗೆ ರಫ್ತು

ಅರಬ್ ರಾಷ್ಟ್ರಗಳಿಗೆ ತೆಂಗು ಹೆಚ್ಚಾಗಿ ರಫ್ತಾಗುತ್ತದೆ. ಉಳಿದಂತೆ ಭಾರತೀಯರು ಹೆಚ್ಚು ನೆಲೆಸಿರುವ ವಿದೇಶಗಳಲ್ಲಿ ತೆಂಗಿಗೆ ಹೆಚ್ಚಿನ ಬೇಡಿಕೆಯಿದೆ. ಸೌದಿ ಅರೇಬಿಯಾ, ಕತಾರ್, ದುಬೈ, ಅಬುದಾಬಿ ಸೇರಿ ಇನ್ನಿತರ ರಾಷ್ಟ್ರಗಳಿಗೆ ತೆಂಗು ರಫ್ತಾಗುತ್ತದೆ. ದಕ್ಷಿಣ ಭಾರತದಲ್ಲಿ ತೆಂಗಿನ ಕಾಯಿ ಅಧಿಕವಾಗಿ ಬಳಸಿದರೆ ಉತ್ತರ ಭಾರತದ ಮಂದಿ ಕೊಬ್ಬರಿಯನ್ನು ಹೆಚ್ಚು ಬಳಸುತ್ತಾರೆ.

ಬೆಳೆಗಾರರಿಗೆ ಸಬ್ಸಿಡಿ

ತೆಂಗು ಅಭಿವೃದ್ಧಿ ಮಂಡಳಿಯು ರೈತರಿಗೆ 4 ಹೆಕ್ಟೇರ್‌ವರೆಗೆ ಪ್ರೋತ್ಸಾಹಧನ ನೀಡುತ್ತಿದ್ದು, ಪ್ರತಿ ಹೆಕ್ಟೇರ್‌ಗೆ 6500 ರೂ. ನೀಡುತ್ತಿದೆ. ರಾಜ್ಯ ತೋಟಗಾರಿಕಾ ಇಲಾಖೆಯಿಂದ ಸಣ್ಣ, ಅತಿ ಸಣ್ಣ, ಪ.ಜಾ, ಪ.ಪಂ.ದ ತೆಂಗು ಬೆಳೆಗಾರರು 1 ಹೆಕ್ಟೇರ್‌ಗೆ 75 ಸಾವಿರ ರೂ. ಸಬ್ಸಿಡಿ ಪಡೆಯಬಹುದು. ರೈತರು ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಗಳಲ್ಲಿರುವ ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕಿಸಬಹುದು.

ತಿಪಟೂರು ಟಾಲ್ ತೆಂಗಿನ ಕಾಯಿಗಳನ್ನು ಶೇಖರಿಸಿಟ್ಟು ಉಂಡೆ ಕೊಬ್ಬರಿ ಮಾಡಲಾಗುತ್ತದೆ. ತಿಪಟೂರು ಕೊಬ್ಬರಿಗೆ ವಿದೇಶಗಳಲ್ಲಿ ಸಾಕಷ್ಟು ಬೇಡಿಕೆ ಇದೆ. ಇನ್ನು ಚೌಗಾಟ್ ಆರೆಂಜ್ ದ್ವಾರ್ಫ್, ಗಂಗಾ ಬೋಂಡಂ, ಚೌಗಾಟ್ ಗ್ರೀನ್ ದ್ವಾರ್ಫ್ ತಳಿಗಳನ್ನು ಎಳನೀರಿಗಾಗಿ ಹೆಚ್ಚಾಗಿ ಬಳಸಲಾಗುತ್ತದೆ.

ತೆಂಗಿನ ರೋಗಗಳಿಗೆ ಪರಿಹಾರ: ಇತ್ತೀಚಿನ ದಿನಗಳಲ್ಲಿ ತೆಂಗನ್ನು ಕಾಡುತ್ತಿರುವ ರೋಗಗಳು ರೈತರನ್ನು ಕಂಗೆಡಿಸಿವೆ. ಪ್ರಮುಖವಾಗಿ ತೆಂಗು ಬೆಳೆಗೆ ಕಾಂಡ ಸೋರುವ ರೋಗ, ಕಪ್ಪುತಲೆ ಹುಳ, ಕಾಂಡ ಕೊರೆಯುವ ಹುಳಗಳ ಕಾಟ ಭಾದಿಸುತ್ತವೆ. ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ರೋಗಗಳನ್ನು ತಡೆಗಟ್ಟಲು ತೋಟಗಾರಿಕಾ ಇಲಾಖೆಯು ಹಲವಾರು ಔಷಧಗಳನ್ನು ಸಂಶೋಧಿಸಿ ಉಚಿತವಾಗಿ ನೀಡುತ್ತಿದೆ.

ಆದಾಯ ದ್ವಿಗುಣ ಹೇಗೆ?: ತೆಂಗಿನ ಮರಗಳ ನಡುವೆ ಕೋಕೋ, ಕಾಳು ಮೆಣಸನ್ನು ಉಪ ಬೆಳೆಯಾಗಿ ಬೆಳೆದರೆ ಉತ್ತಮ ಲಾಭಾಂಶ ಪಡೆಯಬಹುದಾಗಿದೆ. ಪ್ರತಿ ವರ್ಷ 1,200 ಕೋಟಿ ರೂ. ಮೌಲ್ಯದ ಕೋಕೋ ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ. 1 ಎಕರೆ ತೆಂಗಿನ ತೋಟದ ಮಧ್ಯೆ 650 ರಿಂದ 900 ಕೆ.ಜಿ. ಕೋಕೋ ಬೆಳೆ ಬೆಳೆಯ ಬಹುದಾಗಿದೆ. ಜತೆಗೆ 4 ರಿಂದ 5 ಕೆ.ಜಿ. ಕಾಳು ಮೆಣಸು ಬೆಳೆಯಬಹುದು. ಇದರಿಂದ ತೆಂಗಿನ ಫಲವತ್ತತೆ ಹೆಚ್ಚುತ್ತದೆ ಎಂಬುದು ತೋಟಗಾರಿಕಾ ಇಲಾಖೆ ಜಂಟಿ ನಿರ್ದೇಶಕ ಬಿ.ಎನ್.ಪ್ರಸಾದ್ ಅಭಿಪ್ರಾಯ.



ದೇಶದಿಂದ ರಫ್ತಾಗಿರುವ ತೆಂಗಿನ ಉತ್ಪನ್ನಗಳ ಮೌಲ್ಯ

ಉತ್ಪನ್ನ	2018-19	2019-20	20-21
ಆಕ್ಟಿವೇಟೆಡ್ ಕಾರ್ಬನ್	1,344.11	1,184.60	1514.27
ತೆಂಗಿನ ಎಣ್ಣೆ	136.72	141.70	255.87
ಒಣ ತೆಂಗಿನ ಕಾಯಿ	199.94	119.23	113.05
ಡೆಸಿಕೇಟೆಡ್ ಕೊಕನೆಟ್	14.20	11.77	28.58
ಕೊಬ್ಬರಿ	34.51	36.14	33.23
ಇತರ ಉತ್ಪನ್ನ	82.45	73.52	147.10

Visit our Youtube Channel for Video Documents.
Scan QR code

ನಿಮ್ಮ ಮುಷ್ಟಿಯಲ್ಲೇ ಇದೆ ಆರೋಗ್ಯ

ಆರೋಗ್ಯ ಭಾಗ್ಯ ಎಂದು ಬಾಯಿಮಾತಿಗಷ್ಟೇ ಸೀಮಿತವಾಗಿ, ಹಣದ ಹಿಂದೆ ಓಡುವ ಮನುಷ್ಯ ಅನಾರೋಗ್ಯವನ್ನು ಮನೆಗೆ ತರುತ್ತಿದ್ದು, ಇದಕ್ಕೆ ಸಿರಿಧಾನ್ಯ ಸೇವನೆಯೇ ಪರಿಹಾರ ಎಂಬುದು 'ಮಿಲೆಟ್ ಮ್ಯಾನ್' ಎಂದೇ ಖ್ಯಾತರಾದ ಡಾ. ಖಾದರ್ ಅವರ ಸ್ಪಷ್ಟ ನುಡಿ. 'ವಿಜಯವಾಣಿ' ಹಾಗೂ ದಿಗ್ವಿಜಯ ನ್ಯೂಸ್ 24X7' ವತಿಯಿಂದ ಬುಧವಾರ ಆಯೋಜಿಸಿದ್ದ ಕ್ಲಬ್‌ಹೌಸ್ ಸಂವಾದದಲ್ಲಿ ಒಟ್ಟಾರೆ ಆರೋಗ್ಯ ಪರಿಕಲ್ಪನೆ, ಪಾಶ್ಚಾತ್ಯ ಅಂಧಾನುಕರಣೆಯಿಂದಾದ ಅಪಾಯ, ಇದರಲ್ಲಿ ವೈದ್ಯರು ಹಾಗೂ ವಿಜ್ಞಾನಿಗಳ ಪಾತ್ರ, ಜನರು ಕೈಗೊಳ್ಳಬೇಕಾದ ಕ್ರಮಗಳ ಕುರಿತು ವಿಸ್ತೃತವಾಗಿ ಮಾತನಾಡಿದ್ದಲ್ಲದೆ, ಜನರ ಪ್ರಶ್ನೆಗಳಿಗೆ ಉತ್ತರಿಸಿದರು.



ಅಮೆರಿಕದಲ್ಲಿ ದಿಗ್ಭ್ರಮೆ...



ಉನ್ನತ ವ್ಯಾಸಂಗ ಕೈಗೊಂಡು ಅಮೆರಿಕದಲ್ಲಿ ವಿಜ್ಞಾನಿಯಾಗಿ ನೌಕರಿಗೆ ತೆರಳಿದೆ. ಸಾಮಾನ್ಯವಾಗಿ 14-15 ವರ್ಷಕ್ಕೆ ಬಾಲಕಿಯರು ಪ್ರಾಯಕ್ಕೆ ಬರುತ್ತಾರೆ. ಆದರೆ ಅಮೆರಿಕದಲ್ಲಿ ಕೇವಲ ಆರು ವರ್ಷದ ಮಗುವನ್ನು ಈ ಸ್ಥಿತಿಯಲ್ಲಿ ಕಂಡು ದಿಗ್ಭ್ರಮೆಗೊಳಗಾದೆ. ಏಕೆ ಹೀಗಾಗುತ್ತದೆ ಎಂದು ಹುಡುಕುತ್ತಿರುವಾಗ, ಒಟ್ಟಾರೆ ಕಾರ್ಪೋರೇಟ್ ಕಂಪನಿಗಳ ಹುನ್ನಾರ ಬೆಳಕಿಗೆ ಬಂತು. ಪಾಶ್ಚಾತ್ಯ ಅಂಧಾನುಕರಣೆಯಿಂದ ನಮ್ಮ ದೇಶದಲ್ಲಿ ನಮಗೆ ಬೇಕಾಗಿದ್ದ ಪದಾರ್ಥಗಳನ್ನು ಬಿಟ್ಟು ಕಾರ್ಪೋರೇಟ್ ಕಂಪನಿಗಳು ನೀಡುವ ಗೋಧಿ, ಅಕ್ಕಿ, ಸಕ್ಕರೆ, ಮೊಟ್ಟೆ, ಮಾಂಸಗಳ ಮೇಲೆ ಅವಲಂಬಿತರಾಗಿದ್ದೇವೆ. ಪಾಶ್ಚಾತ್ಯ ಶಿಕ್ಷಿತ ಪೌಷ್ಟಿಕಾಂಶ ತಜ್ಞರು ನಮ್ಮನ್ನು ತಪ್ಪು ದಾರಿಯಲ್ಲಿ ಕೊಂಡೊಯ್ಯುತ್ತಿದ್ದಾರೆ ಎಂಬುದನ್ನು ಅಲ್ಲಿ ತಿಳಿದೆ. 10 ವರ್ಷ ಅಮೆರಿಕದಲ್ಲಿ ಸಂಶೋಧನೆ ವಿಭಾಗದಲ್ಲಿ ವಿಜ್ಞಾನಿಯಾಗಿದ್ದೆ. ಗೊಬ್ಬರ, ಕೀಟನಾಶಕ, ಕೃಷಿ ಸೇರಿ ಅನೇಕ ವಿಭಾಗಗಳಲ್ಲಿ ಕಾರ್ಯನಿರತನಾಗಿದ್ದೆ. ಇದನ್ನೆಲ್ಲ ನೋಡಿದ ಮೇಲೆ ನನಗೆ ಗೊತ್ತಾಗಿದ್ದು, ಕಾರ್ಪೋರೇಟ್ ಕಂಪನಿಗಳು ನಮ್ಮ ಆಹಾರವನ್ನು ನಮ್ಮಿಂದ ದೂರ ಮಾಡಿ, ಅವರು ಕಂಡುಹಿಡಿದ ಬೀಜ ಹಾಗೂ ಆಹಾರಗಳ ಮೇಲೆ ಅವಲಂಬಿತರಾಗಿ, ನಾವು ತಿನ್ನಬೇಕಾದ ಆಹಾರವನ್ನೂ ಅವರು ನಿಯಂತ್ರಿಸುತ್ತಿದ್ದಾರೆ. ಕಳೆದ 60-70 ವರ್ಷದಿಂದ ನಮ್ಮ ಆಹಾರ ಹಾಗೂ ಕೃಷಿಯ ನಿಯಂತ್ರಣವನ್ನು ಅವರ ಕೈಗೆ ಕೊಟ್ಟಿದ್ದೇವೆ. ನಾವದನ್ನು ಗಮನಿಸಲಾಗದಂತೆ ಮೂರ್ಖರಾಗಿಸಲು ವೈದ್ಯರ ಮೂಲಕ ಭ್ರಮೆ ಸೃಷ್ಟಿಸುತ್ತಿವೆ.

ಕರೊನಾದಿಂದಾಗಿ ಯಾರೂ ಮೃತರಾಗಿಲ್ಲ

ಮಧುಮೇಹ, ಕ್ಯಾನ್ಸರ್ ಸೇರಿ ಇನ್ನಿತರ ಕಾಯಿಲೆ ಇರುವವರನ್ನು(ಕೊ ಮಾರ್ಬಿಡ್)ಕರೊನಾ ಈ ವೈರಸ್ ಬಾಧಿಸುತ್ತಿದೆ. ಅಂದರೆ ಕಳೆದ ಅನೇಕ ದಶಕಗಳಿಂದ ರೋಗನಿರೋಧಕ ಶಕ್ತಿಯನ್ನು ಕಳೆದುಕೊಂಡು ಬರುತ್ತಿರುವುದರ ಫಲ ಇದು. ಕರೊನಾದಿಂದ ಅಲ್ಲ, ಬಹುತೇಕರು ರೋಗನಿರೋಧಕ ಶಕ್ತಿಯ ಕೊರತೆಯಿಂದ ನಿಧನರಾಗಿದ್ದಾರೆ. ಸಾಮೆ ತಿಂದಿದ್ದರೆ ಕರೊನಾ ಬರುತ್ತಿರಲಿಲ್ಲ.

ಭತ್ತ ಬೆಳೆಯಲು ಸಾಕಷ್ಟು ನೀರು

ಒಂದು ಕೆ.ಜಿ. ಸಿರಿಧಾನ್ಯ ಬೆಳೆಯಲು 300 ಲೀ. ನೀರು ಸಾಕು. ಆದರೆ, ಭತ್ತ ಬೆಳೆಯಲು 8 ಸಾವಿರ ಲೀಟರ್ ನೀರು ಬೇಕು. ಮಳೆಯಾತ್ರಿತ ಭತ್ತ ಹಾಗೂ ಡ್ಯಾಂ ನೀರಿನಲ್ಲಿ ಬೆಳೆದ ಭತ್ತಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಜಲಾಶಯದಲ್ಲಿರುವ ಲವಣಾಂಶಗಳು ಹೂಳಾಗಿ ಕೆಳಗೆ ಕೂರುತ್ತವೆ. ನೀರಿನಲ್ಲಿ ಸತ್ವ ಇರುವುದಿಲ್ಲ. ಇದಕ್ಕಾಗಿಯೇ ಕೃಷಿಯಲ್ಲಿ ರಾಸಾಯನಿಕ ಗೊಬ್ಬರ, ಕ್ರಿಮಿಕೀಟನಾಶಕ ಬಲಸಲಾಗುತ್ತಿದೆ. ಇದೆಲ್ಲವನ್ನೂ ವಿಜ್ಞಾನಿಗಳು ಮುಚ್ಚಿಟ್ಟು ಭೂಮಿ ತಾಯಿ ಮೇಲೆ ದೌರ್ಜನ್ಯ ಎಸಗಿ ನಿರ್ವೀಯರಾಗಿಸುತ್ತಿದ್ದಾರೆ.

ಸಿರಿಧಾನ್ಯ ಸೇವನೆಯಿಂದ ಅನೇಕ ಕಾಯಿಲೆಗಳಿಗೆ ಪರಿಹಾರ



ರಾಷ್ಟ್ರೀಯ ಪೌಷ್ಟಿಕ ಆಹಾರ ಸಪ್ತಾಹ ವಿಶೇಷ

ಔಷಧ ಕಂಪನಿಗಳ ಹುನ್ನಾರ

ನಾನು ಅಮೆರಿಕದಿಂದ ವಾಪಸಾಗುವ ವೇಳೆಗೇ ಭಾರತದಲ್ಲಿ ಮಧುಮೇಹ, ಆರ್ಥರೈಟಿಸ್, ಹಾರ್ಮೋನ್ ಅಸಮತೋಲನ, ಸ್ತನದಲ್ಲಿ ಗಡ್ಡೆಗಳು ಸೇರಿ ಅನೇಕ ಕಾಯಿಲೆಗಳು ಸೇರಿ ಅನೇಕ ಸಮಸ್ಯೆ ಬೆಳೆಯುತ್ತಲೇ ಇದ್ದವು. ವಿಶ್ವ ಮಟ್ಟದಲ್ಲಿ ಔಷಧ ಕಂಪನಿಗಳು ದೈತ್ಯಾಕಾರವಾಗಿ ಬೆಳೆದಿವೆ. ಆಹಾರದ ಜತೆಗೆ ಔಷಧ ಮಾರಾಟದ ಮಹಾಮಾರಿಯೂ ಬೆಳೆದಿದೆ. ಈ ನಡುವೆ ಆಯುರ್ವೇದದ ಆದ್ಯುತ ಚಿಕಿತ್ಸಾ ವಿಧಾನಗಳು ಕಣ್ಮರೆಯಾದವು. ಅಕ್ಕಿ, ಗೋಧಿ, ಸಕ್ಕರೆ ತಿನ್ನುವುದರಿಂದ ನಮಗೆ ಕಾಯಿಲೆ ಬರುತ್ತಿವೆ ಎಂದು ಯಾವ ಪೌಷ್ಟಿಕಾಂಶ ತಜ್ಞರೂ ಹೇಳುತ್ತಿಲ್ಲ ಎಂದರೆ, ಅದಕ್ಕೆ ಈ ಕಂಪನಿಗಳೇ ಕಾರಣ. ಇದರಿಂದಾಗಿ ಅನೇಕ ಅನುವಂಶೀಯ ಕಾಯಿಲೆಗಳಿಗೆ ಕಾರಣವಾಗುತ್ತಿವೆ. ನಮ್ಮ ದೇಶದ ಹಸುಗಳನ್ನು ತೆಗೆದುಕೊಂಡು ಒಂದು ಹಸುವಿನಿಂದ ನಿರಂತರ ಹಾಲು ಕೊಡುವಂತೆ ಮಾಡುವ ಕೆಲಸ ಪ್ರಗತಿ ಹೆಸರಿನಲ್ಲಿ ನಡೆದಿದೆ. ಕ್ಯಾಲ್ಕಿಯಂ ಸಿಗುತ್ತದೆ ಎಂದು ಸಂಸ್ಕರಿಸಿದ ಈ ಹಾಲುಗಳನ್ನು ಕುಡಿಸಲಾಗುತ್ತಿದೆ. ಇದರಿಂದ ಮಕ್ಕಳ ಹಾರ್ಮೋನ್ ಅಸಮತೋಲನಕ್ಕೆ ಕಾರಣವಾಗುತ್ತಿದೆ. ಈಗ ಎಲ್ಲ ದೇಶಗಳಲ್ಲೂ ಈ ಪರಿಣಾಮ ಗೋಚರಿಸುತ್ತಿದೆ. ಕಪ್ಪು ಎಳ್ಳಿನಿಂದ ಸಿಗುವಷ್ಟು ಕ್ಯಾಲ್ಕಿಯಂ ಹಾಲಿನಿಂದ ಸಿಗುವುದಿಲ್ಲ.

ವಿಜಯವಾಣಿಗೆ ಧನ್ಯವಾದಗಳು

ಸಿರಿಧಾನ್ಯಗಳನ್ನು ಮಾಧ್ಯಮಗಳು ಮತ್ತಷ್ಟು ಪ್ರಚಾರ ಮಾಡಬೇಕು ಎಂದ ಡಾ. ಖಾದರ್, ಈ ಕುರಿತು ವಿಜಯವಾಣಿಯ ಪರಿಶ್ರಮವನ್ನು ಶ್ಲಾಘಿಸಿದರು. ಸಿರಿಧಾನ್ಯದ ಕುರಿತು ಅನೇಕ ಬಾರಿ ಪ್ರಕಟಿಸಿದ್ದು, ಪತ್ರಿಕೆ ಕಾಳಜಿಗೆ ಅಭಿನಂದನೆಗಳು ಎಂದರು.

ಸಿರಿಧಾನ್ಯಕ್ಕೆ ಬೆಲೆ ಬಂದಿದೆ

ವಿಶ್ವದ 700 ಕೋಟಿ ಜನರಿಗೆ ಆಹಾರ ನೀಡಬೇಕೆಂದರೆ ಈ ತಂತ್ರಜ್ಞಾನ ಬೆಳೆಸಬೇಕು ಎಂದು ಕಂಪನಿಗಳು ಸುಳ್ಳು ಹೇಳುತ್ತಿದ್ದಾರೆ. ಜಲಾಶಯಗಳಿಗಾಗಿ ಜೀವವೈವಿಧ್ಯಗಳನ್ನು, ಆಹಾರ ಪದ್ಧತಿಯನ್ನು ನಿರ್ನಾಮ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ವರ್ಷಕ್ಕೆ 4 ಲಕ್ಷ ಟನ್ ಕಬ್ಬು ಬೆಳೆಯಲಾಗುತ್ತದೆ. ಇಷ್ಟು ಕಬ್ಬು ಬೆಳೆಯಲು ನೀಡುವಷ್ಟು ನೀರನ್ನು ನನಗೆ ನೀಡಿದರೆ ಇಡೀ ದಕ್ಷಿಣ ಭಾರತಕ್ಕೆ ಊಟ ಹಾಕಬಹುದು. ನಾನು ಅಮೆರಿಕದಿಂದ ಬಂದಾಗ ನವಣೆ ಅಕ್ಕಿಗೆ ಒಂದೆರಡು ರೂ. ನೀಡುತ್ತಿದ್ದರು. ಈಗ ಕರ್ನಾಟಕದ ಪ್ರತಿ ಹಳ್ಳಿಯಲ್ಲೂ ಸಿರಿಧಾನ್ಯ ಬೆಳೆಯುತ್ತಿದ್ದಾರೆ. ಉತ್ತಮ ಬೆಲೆ ಸಿಗುತ್ತಿದೆ. ಹಿಂದಿನ ಸರ್ಕಾರ ಮೂರು ವರ್ಷ ಸಿರಿಧಾನ್ಯ ಮೇಳ ಮಾಡಿತು. ಈಗ 2023ನೇ ಇಸವಿಯನ್ನು ಸಿರಿಧಾನ್ಯ ವರ್ಷ ಎಂದು ಘೋಷಣೆ ಮಾಡಲಾಗಿದೆ.

ವಿದೇಶಗಳಲ್ಲೂ ಸಿರಿಧಾನ್ಯ

ಸಿರಿಧಾನ್ಯಗಳನ್ನು ಭಾರತದಲ್ಲಿ ಮಾತ್ರ ಬೆಳೆಯುವುದಿಲ್ಲ. ನವಣೆ ಅಕ್ಕಿಯನ್ನು ಇಟಾಲಿಯನ್ ಮಿಲೆಟ್, ಕೊರ್ಲೆಯನ್ನು ಅಮೆರಿಕನ್ ಮಿಲೆಟ್, ಅರ್ಕವನ್ನು ಹಿಮಾಲಯನ್ ಮಿಲೆಟ್, ಊದಲನ್ನು ಜರ್ಮನ್ ಮಿಲೆಟ್ ಎನ್ನುತ್ತಾರೆ. ಅಂದರೆ ಪ್ರಪಂಚದ ಎಲ್ಲ ಕಡೆಗಳಲ್ಲೂ ಈ ಆಹಾರವನ್ನು ಸೇವಿಸಲಾಗುತ್ತಿತ್ತು. ತಮ್ಮ ಉದ್ಯಮದ ಲಾಭಕ್ಕಾಗಿ ಈ ಆಹಾರವನ್ನು ಗುರಿಯಾಗಿಸಿಕೊಂಡ ಕಂಪನಿಗಳು ನಿರ್ನಾಮ ಮಾಡಿದ್ದಾರೆ.



ಸೇಬಿಗಿಂತ ಸೀಬೆಹಣ್ಣೇ ಲೇಸು

ಚಳಿ ಇದ್ದ ಜಾಗದಲ್ಲಿ ಸೇಬನ್ನು ಬೆಳೆಯಲಾಗುತ್ತದೆ. ಅದರಲ್ಲಿ ಯಾವ ಪೌಷ್ಟಿಕಾಂಶವೂ ಇರುವುದಿಲ್ಲ. ಅದಕ್ಕಿಂತಲೂ ಸೀಬೆ ಹಣ್ಣು ಉತ್ತಮ. ವಿಟಮಿನ್ ಸಿ ಸೇರಿ ವಿವಿಧ ಪ್ರತಿಜನಕಗಳನ್ನು ಸೀಬೆ ಹಣ್ಣು ಉತ್ಪಾದನೆ ಮಾಡುವ ಕೆಲಸ ಮಾಡುತ್ತದೆ.

ಸಿರಿಧಾನ್ಯ ಎಂಬ ಹೆಸರು

ಎಲ್ಲರಿಗೂ ಆರೋಗ್ಯ ಸಿರಿ ಬೇಕು, ಕೋಟ್ಯಂತರ ರೂ. ಹಣ ಬೇಕಾಗಿಲ್ಲ. ಆರೋಗ್ಯವೇ ಸಿರಿ ಎಂಬ ಕಾರಣಕ್ಕೆ, ಈ ಐದು ಧಾನ್ಯಗಳಿಗೆ ಸಿರಿಧಾನ್ಯ ಎಂದು ಹೆಸರಿಟ್ಟೆ.

ಆಹಾರದ ವಿರುದ್ಧ ಅಪಪ್ರಚಾರ

ಶೇಂಗಾ ತಿಂದರೆ ಆಪ್ಲೋಟಾಕ್ಸಿನ್ ಬರುತ್ತದೆ ಎಂದು ವಿಜ್ಞಾನಿಗಳು ಆಪಾದನೆ ಮಾಡಿದರು. ಶೇಂಗಾ ಇಳುವರಿ ಬಂದಾಗ, ಕಟಾವು ಮಾಡಿದಾಗ ತೇವಾಂಶ ಇದ್ದರೆ, ಅದರಲ್ಲಿ ಫಂಗಸ್ ಬೆಳೆದರೆ ತೊಂದರೆ ಆಗುತ್ತದೆ. ಆದರೆ ಅದನ್ನು ನೈಪುಣ್ಯದಿಂದ ಬೆಳೆಯುವ ರೈತರು ನಮ್ಮಲ್ಲಿ ಈಗಲೂ ಇದ್ದಾರೆ. ಶೇಂಗಾದಿಂದ ಅನೇಕ ಉಪಯೋಗಗಳಿವೆ.

■ ಸಿರಿಧಾನ್ಯಗಳನ್ನು ರಾಸಾಯನಿಕದಿಂದ ಬೆಳೆದಾಗ ಆಗುವ ಅಪಾಯ ಏನು? ಮಿಲೆಟ್ ವರ್ಷದ ಲಾಭ ಹೇಗೆ ಪಡೆಯಬಹುದು?

ಕಾರ್ಪೋರೇಟ್ ಕಂಪನಿಗಳು ತಂತ್ರಜ್ಞಾನದ ಹೆಸರಿನಲ್ಲಿ ರೈತರ ಬೀಜದ ಹಕ್ಕನ್ನು ಕಸಿದುಕೊಂಡಿದ್ದಾರೆ. ಸರ್ಕಾರದಿಂದ ಫೋರ್ಟಿಫಿಕೇಷನ್ ಹೆಸರಿನಲ್ಲಿ ಸಾವಿರಾರು ಕೋಟಿ ರೂ. ವೆಚ್ಚ ಮಾಡುತ್ತಾರೆ. ಆದರೆ ಸಿರಿಧಾನ್ಯಕ್ಕೆ ಸಣ್ಣ ಸಂಸ್ಥೆ ಮಾಡಿರುತ್ತಾರೆ. ಮಿಲೆಟ್ ವರ್ಷ ಘೋಷಣೆ ಉತ್ತಮವಾದರೂ ಮತ್ತೆ ಬೀಜದ ಹಕ್ಕನ್ನು ಕಿತ್ತುಕೊಳ್ಳುವ ಸಂಚು ಇಲ್ಲೂ ಇರಬಹುದು. ಜೈವಿಕ ತಂತ್ರಜ್ಞಾನ ಬಳಸಿ, ಗೊಬ್ಬರ ಬಳಸಿ ಬೆಳೆಯುವ ಆಹಾರದಿಂದ ದೂರ ಸರಿಯಿರಿ ಎಂದು ರೈತರಿಗೆ ಕರೆ ನೀಡುತ್ತೇನೆ.

■ ಸಂಧಿವಾತಕ್ಕೆ ಸೂಕ್ತ ಸಿರಿಧಾನ್ಯ ಯಾವುದು?

ನವಣೆ ಅಕ್ಕಿ ಉತ್ತಮವಾದದ್ದು. ವಾರದಲ್ಲಿ ಮೂರು ದಿನ, ಮಿಕ್ಕಿದ ದಿನಗಳಲ್ಲಿ ಒಂದೊಂದು ಸಿರಿಧಾನ್ಯ ಸೇವಿಸಿ. ಎಳ್ಳಿನ ಉಂಡೆ ಸೇವಿಸಿ.

■ ಆಧುನಿಕ ಆಹಾರ ಪದ್ಧತಿ ದುರಭ್ಯಾಸದಿಂದ ಹೊರಬಂದು ಶಿಸ್ತಿನ ಆರೋಗ್ಯ ಕ್ರಮಕ್ಕೆ ಒಗ್ಗಿಕೊಳ್ಳಲು ಸಾಧ್ಯವಾಗುವುದು ಹೇಗೆ?

ನೀವು 45 ವರ್ಷ ದಾಟಿದವರಾದರೆ ನಿಮ್ಮ ಕೈ ಮುಷ್ಟಿಯಷ್ಟು ಆಹಾರವನ್ನು ಸೇವಿಸಿ. 30-40 ವರ್ಷದವರಾದರೆ ಎರಡು ಹಿಡಿ ಬೇಕು. ಚಿಕ್ಕ ಮಕ್ಕಳಾದರೆ ಮುಷ್ಟಿಗಿಂತ ಹೆಚ್ಚು ಬೇಕು. ದ್ವಿದಳ ಧಾನ್ಯಗಳು ಅರ್ಧ ಹಿಡಿಯಷ್ಟು ಸಾಕು. ಮನೆಯಲ್ಲಿರುವವರೆಲ್ಲರನ್ನೂ ಒಂದೆಡೆ ಸೇರಿಸಿ. ಮೇಲೆ ತಿಳಿಸಿದಂತೆ ಅವರವರ ವಯೋಮಾನಕ್ಕೆ ತಕ್ಕಂತೆ ಮುಷ್ಟಿಯಷ್ಟು ಧಾನ್ಯವನ್ನು ಹಾಕಿಸಿ. ಒಟ್ಟು ಸೇರಿಸಿ ಅಳತೆ ಮಾಡಿಟ್ಟುಕೊಳ್ಳಿ. ಅಷ್ಟು ಆಹಾರವನ್ನು ಪ್ರತಿದಿನ ಆಡುಗೆಮಾಡಿ, ಹೊಟ್ಟೆ ತುಂಬುತ್ತದೆ. ಒಂದು ಧಾನ್ಯವನ್ನು ಎರಡೆರಡು ದಿನ ಸೇವಿಸಬೇಕು. ಆಹಾರದಲ್ಲಿ ವೈವಿಧ್ಯತೆ ಕಾಯ್ದುಕೊಳ್ಳಬೇಕು. ಒಂದೊಂದು ಸಿರಿಧಾನ್ಯ ಒಂದೊಂದು ಅಂಗವನ್ನು ಶುದ್ಧ ಮಾಡುತ್ತದೆ. ಮಿಲೆಟ್ ಮಿಕ್ಸ್ ಗಳಿಂದ ಉಪಯೋಗಕ್ಕಿಂತ ತೊಂದರೆಯಾಗುತ್ತದೆ. ಎಷ್ಟು ಸೇವಿಸಿದರೂ ಪ್ರಯೋಜನವಿಲ್ಲ.

■ ಸಿರಿಧಾನ್ಯ ಸೇವನೆಯಿಂದ ಆರೋಗ್ಯ ಸಮಸ್ಯೆ ಬಗೆಹರಿದಿದ್ದು ಮತ್ತೆ ಅಕ್ಕಿ, ಗೋಧಿ ಸೇವಿಸಬಹುದು ಎಂದು ಅನೇಕರು ಕೇಳುತ್ತಾರಲ್ಲ...

ಸಾಮಾನ್ಯ ಆಹಾರ ಎಂದರೆ ಅಕ್ಕಿ, ಗೋಧಿ, ಹಾಲು, ಸಕ್ಕರೆ ಎನ್ನುವಂತಾಗಿದೆ. ಮತ್ತೆ ಅವನ್ನು ತಿಂದರೆ ರೋಗ ಬರುತ್ತದೆ. ಸಿರಿಧಾನ್ಯವೇ ನಿಜವಾದ ಆಹಾರ ಹಾಗೂ ಭವಿಷ್ಯದ ಆಹಾರ. ಇದು ಅತ್ಯಂತ ಸುಂದರ ಹಾಗೂ ವೈಜ್ಞಾನಿಕ ಆಹಾರ.

■ ಮೂತ್ರದ ಸಮಸ್ಯೆ ಇದ್ದು ಯಾವ ಸಿರಿಧಾನ್ಯ ಉಪಯೋಗಿಸಬೇಕು? ಹೊಟ್ಟೆ ಉರಿಗೆ ಏನು ಪರಿಹಾರ?

ಮೂತ್ರಪಿಂಡ ರೋಗಗಳಿಗೆ ಊದಲು ಉತ್ತಮ ಫಲಿತಾಂಶ ನೀಡುತ್ತದೆ. ಮೂರು ತಿಂಗಳಲ್ಲಿ ಸಮಸ್ಯೆ ನಿವಾರಿಸಿಕೊಳ್ಳಬಹುದು. ಹೊಟ್ಟೆ ಉರಿಗೆ ಮುಖ್ಯವಾಗಿ ಗ್ಯಾಸ್ಟಿಕ್ ಕಾರಣ. ಸಿರಿಧಾನ್ಯವನ್ನು ರಾತ್ರಿ ನೆನೆಸಿ, ಬೆಳಗ್ಗೆ ಒಂದು ಲೋಟಕ್ಕೆ 10-15 ಲೋಟ ನೀರು ಹಾಕಬೇಕು. 10-15 ನಿಮಿಷ ಬೇಯಿಸಿದರೆ ಗಂಜಿ ಆಗುತ್ತದೆ. ಐದಾರು ಗಂಟೆ ಆದ ಮೇಲೆ ಹುಳಿ ಬಂದಿರುತ್ತದೆ. ಇದನ್ನು ಒಂದು ಲೋಟದಂತೆ ಆರು ವಾರ ಸೇವನೆ ಮಾಡಿದರೆ ಯಾವುದೇ ರೀತಿಯ ಹೊಟ್ಟೆ ಉರಿಯೂ ವಾಸಿಯಾಗುತ್ತದೆ.

■ ಎಪಿಲೆಪ್ಸಿ ಔಷಧ ಸೇವಿಸುತ್ತಿದ್ದೇವೆ. ಇದಕ್ಕೆ ಆಹಾರ ಕ್ರಮವೇನು?

ಫಿಟ್ಸ್ ಸಮಸ್ಯೆಗೆ ಸಿರಿಧಾನ್ಯ ಸೇವನೆಯಿಂದ ಆರು ತಿಂಗಳಲ್ಲಿ ಪರಿಹಾರ ಕಂಡುಕೊಳ್ಳಬಹುದು. ನಿಧಾನವಾಗಿ ಮಾತ್ರೆಗಳನ್ನು ಕೈಬಿಡಬಹುದು. ಲಕ್ಷಾಂತರ ಜನರು ಇದರಿಂದ ಉಪಯೋಗ ಪಡೆದುಕೊಂಡಿದ್ದಾರೆ.

■ ಸಿರಿಧಾನ್ಯಕ್ಕೆ ಸರ್ಕಾರ ಪ್ರೋತ್ಸಾಹ ನೀಡಬಹುದಲ್ಲವೇ?

ಎಲ್ಲದ್ದಕೂ ಸರ್ಕಾರದತ್ತ ಬೊಟ್ಟು ಮಾಡುವುದನ್ನು ಬಿಡಬೇಕು. ಮೊದಲು ನಮ್ಮಲ್ಲಿ ಬದಲಾವಣೆ ಆಗಬೇಕು. ನಾವು ಒತ್ತಾಯ ಮಾಡಿದರೆ ಸರ್ಕಾರಗಳು ಕೆಲಸ ಮಾಡುತ್ತವೆ ಅಥವಾ ಹಣಕ್ಕಾಗಿ ಕೆಲಸ ಮಾಡುತ್ತವೆ. ಹಣ ನೀಡಲು ಆಗುವುದಿಲ್ಲ, ಜನರು ಒತ್ತಡ ಹೇರುವುದರಿಂದ ಆಗುತ್ತದೆ. ಜನರಲ್ಲಿ ಜಾಗೃತಿ ಮೂಡಿಸಿದರೆ ಆಗುತ್ತದೆ ಎಂಬ ಆಶಯ ಇದೆ.



■ ವಿಟಮಿನ್ ಬಿ12 ಕೊರತೆಗೆ ಏನು ಮಾಡಬೇಕು?

ಸಿರಿಧಾನ್ಯ ಬಿಟ್ಟು ಪ್ರಪಂಚದ ಯಾವುದರಿಂದಲೂ ಬಿ12 ಕೊರತೆಗೆ ಪರಿಹಾರ ಸಾಧ್ಯವಿಲ್ಲ. ಮಾಂಸ ಅಥವಾ ಮೀನು ತಿನ್ನಬೇಕು ಎನ್ನುವುದು ಅವೈಜ್ಞಾನಿಕ ವಿಷಯ.

■ ತಲಸ್ಸೇಮಿಯಾಕ್ಕೆ ಏನು ಪರಿಹಾರ?

ರಕ್ತದ ಕ್ಯಾನ್ಸರ್‌ಗೆ ನೀಡಿರುವ ಪ್ರೋಟೊಕಾಲ್ ಅನುಸರಿಸಿ, ಗುಣವಾಗಬಹುದು.

■ ಮಕ್ಕಳಿಗೆ ಸಿರಿಧಾನ್ಯ ನೀಡಬಹುದೇ?

9 ತಿಂಗಳ ಮಗುವಿನಿಂದ ನೂರಾರು ವರ್ಷದವರೆಗೆ ಎಲ್ಲರೂ ಸೇವಿಸಬಹುದು.

02-09-2021 Vv Pg 08

02-09-2021 Dec Hrd Pg 12

DID YOU KNOW?



The pepper fruit's global sojourn

Peppers are cosmopolitan, a vegetable that comes in far more varieties than there are nations in the world.

One day, you can slice a mild orange bell pepper to dip in hummus. You may roast red peppers and blend them into a dip or a sauce of their own, like ajvar or romesco. Poblano peppers can add some heat to a dish, or even become a meal like chile rellenos. But watch out for those Carolina Reaper peppers.

All of these dishes have in common the humble pepper plant, or Capsicum spp.

The plant originated in Central and South America and eventually crossed the oceans in the hands of traders, says Pasquale Tripodi of the CREA Research Center for Vegetable and Ornamental Crops in Italy.

In a paper published in *The Proceedings of the National Academy of Sciences*, Tripodi and European colleagues shared the results of their studies of the genetics of more than 10,000 samples of peppers from around the world.

Tripodi and his colleagues focused on the most widely consumed pepper group, Capsicum annuum, the species that is grown into bell peppers of all colours, cayenne peppers and jalapeños. The researchers found that Europe and Asia shared a variety of types, suggesting that peppers moved along trade routes between East and West. The team speculates that Portuguese traders, who in the 16th century moved between South America, Europe, Africa and Asia, may have transported some peppers along with them, helping to explain similarities between African peppers and those on either end of this long axis.

Once peppers gained admirers in a new location, farmers seem to have made their own selections over the years; peppers in Eastern Europe were sweeter and less pungent, while East Asian peppers were small and fiery. The researchers uncovered genes associated with these traits and others, which may be of use to breeders in the future.

NYT